**ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,**
**ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯಂ, ಬೆಂಗಳೂರು-2.**

**ಸಂಖ್ಯೆ:ಸಿ2:ಸ.ಶಿ.ಅ/ವಸತಿಶಾಲೆ/45/11-12** **ದಿನಾಂಕ: 25/05/2012**

**ಆಹಾರ ಪೂರೈಕೆ ಮತ್ತು ಅರೆಕಾಲಿಕ ಶಿಕ್ಷಕರು ಹಾಗೂ ಸಿಬ್ಬಂದಿ ಪೂರೈಕೆಗಾಗಿ ದರ ಪಟ್ಟಿ ಆಹ್ವಾನ**

ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ ರವರ ವತಿಯಿಂದ ಸ.ಮಾ.ಪ್ರಾ.ಶಾಲೆ ತಲಘಟ್ಟಪುರ, ಬೆಂಗಳೂರು ದಕ್ಷಿಣ ವಲಯ-1 ಇಲ್ಲಿ 2012-13 ನೇ ಸಾಲಿನಲ್ಲಿ ವಿಶಿಷ್ಟ ವರ್ಗದ ಮಕ್ಕಳಿಗೆ ವಸತಿ ಶಾಲೆ ತೆರೆಯಲಾಗಿರುತ್ತದೆ. ಈ ಶಾಲೆಯಲ್ಲಿನ ಗರಿಷ್ಠ 100 ಮಕ್ಕಳಿಗೆ ಈ ಕೆಳಕಂಡ ಕಾರ್ಯಗಳಿಗಾಗಿ ಪ್ರತ್ಯೇಕ ದರಪಟ್ಟಿಯನ್ನು ಕರೆಯಲಾಗಿದೆ.

1. ಆಹಾರ ಪೂರೈಕೆಗಾಗಿ
2. ಅರೆಕಾಲಿಕ ಶಿಕ್ಷಕರು ಹಾಗೂ ಸಿಬ್ಬಂದಿ ಪೂರೈಕೆಗಾಗಿ

ಈ ಮೇಲಿನ ಎರಡು ಕಾರ್ಯಗಳಿಗಾಗಿ ಪ್ರತ್ಯೇಕ ದರಪಟ್ಟಿಯನ್ನು ಸಲ್ಲಿಸುವುದು. ದರಪಟ್ಟಿ ಸಲ್ಲಿಸಲಿಚ್ಛಿಸುವ ಸ್ವಯಂ ಸೇವಾ ಸಂಸ್ಥೆಯವರು ದಿನಾಂಕ:04.06.2012 ರ ಸಂಜೆ 5.00 ಗಂಟೆಯೊಳಗೆ ದರಪಟ್ಟಿಗಳನ್ನು ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಉಪನಿರ್ದೇಶಕರನ್ನು ಸಂಪರ್ಕಿಸಬಹುದಾಗಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಇಲಾಖಾ ವೆಬ್‌ಸೈಟ್ www.ssakarnataka.gov.in, www.schooleducation.kar.nic.in ಇದನ್ನು ನೋಡುವುದು. ಹಾಗೂ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ, ದೂರವಾಣಿ ಸಂಖ್ಯೆ: 080-26705692 ನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿರುತ್ತದೆ.

ಉಪನಿರ್ದೇಶಕರು ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು
ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ

25/5/12

ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

**ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,**
**ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯಂ, ಬೆಂ–2.**

ಸಂಖ್ಯೆ : ಸಿ2/ಸ.ಶಿ.ಅ/ಸನಿವಾಸ ಶಾಲೆ/45/2011–12 ದಿನಾಂಕ : 25/05/2012

# ಪ್ರಕಟಣೆ

**ವಿಷಯ : ವಿಶಿಷ್ಟ ವರ್ಗದ ಮಕ್ಕಳ ವಸತಿ ಶಾಲೆಗೆ ಆಹಾರ ಪೂರೈಕೆ ಮಾಡುವ ಕುರಿತು.**

* * * *

2011–12 ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನದಡಿ ಕೆಲವು ನಿರ್ದಿಷ್ಟ ವರ್ಗಗಳ ಮಕ್ಕಳಿಗೆ ಬೆಂಗಳೂರು ದಕ್ಷಿಣ ತಾಲ್ಲೂಕು, ತಲಘಟ್ಟಪುರದಲ್ಲಿ ವಸತಿ ಶಾಲೆಯನ್ನು ಪ್ರಾರಂಭಿಸಲಾಗಿದೆ. ಸದರಿ ಶಾಲೆಯಲ್ಲಿ 100 ಮಕ್ಕಳು ದಾಖಲಾಗಲು ಅವಕಾಶವಿರುತ್ತದೆ.

2012–13 ನೇ ಸಾಲಿಗೆ ಈ ಶಾಲೆಯ ಮಕ್ಕಳಿಗೆ ಆಹಾರ ಪೂರೈಸಲು ಅರ್ಹ ಸಂಸ್ಥೆಗಳಿಂದ ದರಪಟ್ಟಿ ಕರೆಯಲಾಗಿದೆ. ಆಸಕ್ತರು ಮೊಹರು ಮಾಡಿದ ಲಕೋಟೆಯಲ್ಲಿ ದರಪಟ್ಟಿಯನ್ನು ದಿನಾಂಕ: 04–06–2012 ಸಾಯಂಕಾಲ 5.00 ಗಂಟೆಯೊಳಗಾಗಿ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಷರತ್ತುಗಳು ಈ ಕೆಳಕಂಡತಿದೆ.

1. ಜಿಲ್ಲೆಯಲ್ಲಿರುವ ಅರ್ಹ ಸ್ವಸಹಾಯ ಗುಂಪು ಸ್ತ್ರೀ ಶಕ್ತಿ ಸಂಘ ಅಥವಾ ಸರ್ಕಾರೇತರ ಸ್ವಯಂ ಸೇವಾ ಸಂಘಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.
2. ಸ್ವಸಹಾಯ ಗುಂಪು ಮತ್ತು ಸ್ತ್ರೀ ಶಕ್ತಿ ಉತ್ತಮ ಸಂಘಕ್ಕೆ ಆದ್ಯತೆಯನ್ನು ನೀಡಲಾಗುವುದು.
3. ಸಂಬಂಧಿಸಿದ ಸಂಸ್ಥೆಯು ಸರ್ಕಾರದ ನಿಯಮಗಳಡಿಯಲ್ಲಿ ನೋಂದ್ಥಾಯಿತ ಸಂಸ್ಥೆಯಾಗಿರಬೇಕು.
4. ಸಂಬಂಧಿಸಿದ ಸಂಸ್ಥೆಯು ಸೇವಾ ತೆರಿಗೆ ನೋಂದಣಿ ಹೊಂದಿದ್ದು, ಕಳೆದ ಮೂರು ವರ್ಷಗಳ ಸೇವಾ ತೆರಿಗೆ ಸಲ್ಲಿಸಿರುವ ವಿವರಗಳನ್ನು ಸಲ್ಲಿಸಬೇಕು.
5. ಸಂಬಂಧಿಸಿದ ಸಂಸ್ಥೆಯು ಕಳೆದ ಮೂರು ವರ್ಷಗಳಲ್ಲಿ ಆದಾಯ ತೆರಿಗೆ ಪಾವತಿಸಿರುವ ಕುರಿತು ದಾಖಲೆ ಸಲ್ಲಿಸಬೇಕು.
6. ಏಜೆನ್ಸಿಯು ಸರ್ಕಾರದ ಇತರ ಇಲಾಖೆಗಳಲ್ಲಿ ಕಪ್ಪುಪಟ್ಟಿಗೆ ಒಳಪಟ್ಟಿರಬಾರದು.
7. ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ರೂ.800.00 (ವಾರ್ಷಿಕ 9.6 ಲಕ್ಷ) ರಂತೆ ನಿರ್ವಹಣಾ ಅನುದಾನ.

ವಸತಿ ಶಾಲೆಗೆ ದಾಖಲಾದ ಪ್ರತಿ ಮಗುವಿಗೆ ರೂ.800.00 ರಂತೆ ಪ್ರತಿ ಮಾಹೆ ನಿರ್ವಹಣಾ ಅನುದಾನ ಬಳಕೆ ಮಾಡುವ ಅವಕಾಶವಿದೆ. ಪ್ರತಿ ವಿದ್ಯಾರ್ಥಿಗೆ ಶಾಲೆಗೆ ದಾಖಲಾಗುವ ದಿನಾಂಕದಿಂದ ಆ ತಿಂಗಳ ಮುಂದಿನ ಒಟ್ಟು ದಿನಗಳಿಗೆ ಲೆಕ್ಕಾಚಾರ ಮಾಡಿ ಖರ್ಚನ್ನು ಭರಿಸಬೇಕು. ಈ ಅನುದಾನವನ್ನು ಕೆಳಕಂಡ ಚಟುವಟಿಕೆಗಳಿಗೆ ಬಳಕೆ ಮಾಡಬೇಕು.

ಪ್ರತಿ ವಿದ್ಯಾರ್ಥಿಗೂ ನೀಡಬೇಕಾದ ಆಹಾರದ ಸಲಹಾತ್ಮಕ ಪಟ್ಟಿಯನ್ನು ಹಾಗೂ ಮಗುವಿಗೆ ನೀಡಬೇಕಾದ ಪೌಷ್ಟಿಕಾಂಶದ ಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ.

| ಆಹಾರ ಪದಾರ್ಥ | 7–9 ವಯಸ್ಸು | | 10–12 ವಯಸ್ಸು | | 13–15 ವಯಸ್ಸು | |
|---|---|---|---|---|---|---|
| | ಸಸ್ಯಹಾರ | ಮಾಂಸಾಹಾರ | ಸಸ್ಯಹಾರ | ಮಾಂಸಾಹಾರ | ಸಸ್ಯಹಾರ | ಮಾಂಸಾಹಾರ |
| ಧಾನ್ಯಗಳು | 220 | 220 | 290 | 290 | 400 | 400 |
| ಕಾಳುಗಳು | 70 | 60 | 70 | 60 | 70 | 50 |
| ಹಸಿರು ಎಲೆ ತರಕಾರಿಳು | 75 | 75 | 100 | 100 | 100 | 100 |
| ಇತರೆ ತರಕಾರಿಗಳ (ಗೆಡ್ಡೆ | 50 | 50 | 75 | 75 | 150 | 150 |

| | | | | | | |
|---|---|---|---|---|---|---|
| ಹಾಗೂ ಬೇರುಗಳು ಒಳಗೊಂಡಂತೆ) | | | | | | |
| ಹಣ್ಣುಗಳು | 100 | 100 | 100 | 100 | 100 | 100 |
| ಹಾಲು | 600 | 400 | 600 | 400 | 600 | 400 |
| ಎಣ್ಣೆ | 30 | 30 | 30 | 30 | 30 | 30 |
| ಮಾಂಸ ಮೀನು ಮತ್ತು ಮೊಟ್ಟೆ | – | 60 | – | 60 | – | 60 |
| ಸಕ್ಕರೆ ಮತ್ತು ಬೆಲ್ಲ | 30 | 30 | 30 | 30 | 30 | 30 |
| ಬೀಜಗಳು (ಕಡಲೆಬೀಜ) | 30 | 20 | 40 | 30 | 40 | 30 |

**ಸಿದ್ಧಪಡಿಸಿ ಒದಗಿಸಬಹುದಾದ ಆಹಾರದ ಸೂಚಿತ ಪಟ್ಟಿ**

| ಕ್ರಸಂ | ವಾರ | ಮುಂಜಾನೆ | ಬೆಳಗ್ಗಿನ ತಿಂಡಿ | ಮಧ್ಯಾಹ್ನದ ಊಟ | ಸಾಯಂಕಾಲದ ಲಘು ಉಪಹಾರ | ರಾತ್ರಿ ಊಟ |
|---|---|---|---|---|---|---|
| 1 | ಭಾನುವಾರ | ಹಾಲು/ಹಾರ್ಲಿಕ್ಸ್/ ಬೋರ್ನ್‌ವಿಟಾ/ ಕಾಫಿ/ಟೀ | ಇಡ್ಲಿ, ಸಾಂಬಾರು/ ಚಟ್ನಿ | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ, ಮಾಂಸಾಹಾರ, ಮಜ್ಜಿಗೆ, ಉಪ್ಪಿನಕಾಯಿ | ಹಾಲು/ ಕಾಫಿ/ಟೀ ಮತ್ತು ಮೊಳಕೆ ಒಡೆದ ಕಾಳು | ಮುದ್ದೆ/ಚಪಾತಿ/ ರೊಟ್ಟಿ, ಪಲ್ಯ, ಅನ್ನ, ಸಾರು, ಮಜ್ಜಿಗೆ |
| 2 | ಸೋಮವಾರ | ಹಾಲು/ಹಾರ್ಲಿಕ್ಸ್/ ಬೋರ್ನ್‌ವಿಟಾ/ ಕಾಫಿ/ಟೀ | ಚಿತ್ರಾನ್ನ | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ, ಪಲ್ಯೆ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು/ ಕಾಫಿ/ಟೀ ಹಾಗೂ ರಾಗಿ ಗಂಜಿ | ಮುದ್ದೆ/ಚಪಾತಿ/ ರೊಟ್ಟಿ, ಪಲ್ಯ, ಅನ್ನ, ಸಾರು, ಮಜ್ಜಿಗೆ |
| 3 | ಮಂಗಳವಾರ | ಹಾಲು/ಹಾರ್ಲಿಕ್ಸ್/ ಬೋರ್ನ್‌ವಿಟಾ/ ಕಾಫಿ/ಟೀ | ಉಪ್ಪಿಟ್ಟು | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ, ಪಲ್ಯೆ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು/ ಕಾಫಿ/ಟೀ ಹಾಗೂ ಚುರುಮರಿ | ಮುದ್ದೆ/ಚಪಾತಿ/ ರೊಟ್ಟಿ, ಪಲ್ಯ, ಅನ್ನ, ಸಾರು, ಮಜ್ಜಿಗೆ |
| 4 | ಬುಧವಾರ | ಹಾಲು/ಹಾರ್ಲಿಕ್ಸ್/ ಬೋರ್ನ್‌ವಿಟಾ/ ಕಾಫಿ/ಟೀ | ಅವಲಕ್ಕಿ | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ, ಪಲ್ಯೆ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು/ ಕಾಫಿ/ಟೀ ಹಾಗೂ ಅವಲಕ್ಕಿ ಚುಡಾ | ಮುದ್ದೆ/ಚಪಾತಿ/ ರೊಟ್ಟಿ, ಪಲ್ಯ, ಅನ್ನ, ಸಾರು, ಮಜ್ಜಿಗೆ |
| 5 | ಗುರುವಾರ | ಹಾಲು/ಹಾರ್ಲಿಕ್ಸ್/ ಬೋರ್ನ್‌ವಿಟಾ/ ಕಾಫಿ/ಟೀ | ಪುಳಿಯೊಗರೆ | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ, ಪಲ್ಯೆ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು/ ಕಾಫಿ/ಟೀ ಹಾಗೂ ಬ್ರೆಡ್ | ಮುದ್ದೆ/ಚಪಾತಿ/ ರೊಟ್ಟಿ, ಪಲ್ಯ, ಅನ್ನ, ಸಾರು, ಮಜ್ಜಿಗೆ |
| 6 | ಶುಕ್ರವಾರ | ಹಾಲು/ಹಾರ್ಲಿಕ್ಸ್/ ಬೋರ್ನ್‌ವಿಟಾ/ ಕಾಫಿ/ಟೀ | ಪೂರಿ, ಸಾಗು | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ, ಪಲ್ಯೆ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು/ ಕಾಫಿ/ಟೀ ಹಾಗೂ ಹುರಿದ ಕಡಲೆ ಬೀಜ | ಮುದ್ದೆ/ಚಪಾತಿ/ ರೊಟ್ಟಿ, ಪಲ್ಯ, ಅನ್ನ, ಸಾರು, ಮಜ್ಜಿಗೆ |
| 7 | ಶನಿವಾರ | ಹಾಲು/ಹಾರ್ಲಿಕ್ಸ್/ ಬೋರ್ನ್‌ವಿಟಾ/ ಕಾಫಿ/ಟೀ | ತರಕಾರಿ ಪಲಾವ್ | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ, ಪಲ್ಯೆ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು/ ಕಾಫಿ/ಟೀ ಮತ್ತು ಪಕೋಡ | ಮುದ್ದೆ/ಚಪಾತಿ/ ರೊಟ್ಟಿ, ಪಲ್ಯ, ಅನ್ನ, ಸಾರು, ಮಜ್ಜಿಗೆ |

- ಆಯಾ ಋತುಮಾನದಲ್ಲಿ ಸಿಗುವ ಹಣ್ಣುಗಳನ್ನು ನೀಡಬೇಕು (ಎಲ್ಲ ತರಹದ ಹಣ್ಣುಗಳು, ವಾರಕ್ಕೆ ಮೂರು ಬಾರಿ)
- ಎಲ್ಲ ರೀತಿಯ ತರಕಾರಿಗಳನ್ನು ಬಳಸಬೇಕು.
- ಪ್ರತಿ ಭಾನುವಾರದಂದು ಮಾಂಸಾಹಾರ ಸೇವಿಸುವವರಿಗೆ ಮಾಂಸಾಹಾರ ಊಟವನ್ನು ನೀಡಬೇಕು.
- ವಾರಕ್ಕೆ ಎರಡು ಬಾರಿ ಮೊಟ್ಟೆ ನೀಡಬೇಕು.
- ವಾರಕ್ಕೆ ಎರಡು ದಿನ ಸಿಹಿ ತಿಂಡಿಯನ್ನು ಮಾಡಬೇಕು.
- ಹಬ್ಬ-ಹರಿದಿನಗಳಲ್ಲೂ ವಿಶೇಷವಾಗಿ ಹಬ್ಬ ಆಚರಿಸಿ ಸ್ವೀಟ್ಸ್ ಮಾಡಬೇಕು.
- ವರ್ಷದ ಒಟ್ಟು ಗುತ್ತಿಗೆ ಮೊತ್ತ ರೂ.9.6 ಲಕ್ಷಗಳಿಗೆ, ಬಿಡ್ ಸೆಕ್ಯೂರಿಟಿ ಮೊತ್ತ ರೂ.48000/- ಗಳ ಡಿಮ್ಯಾಂಡ್ ಡ್ರಾಫ್ಟ್‌ನ್ನು ಡಿ.ಡಿ.ಪಿ.ಐ. & ಡಿ.ಪಿ.ಓ. ಎಸ್.ಎಸ್.ಎ. ಬೆಂಗಳೂರು ದಕ್ಷಿಣ ಜಿಲ್ಲೆ ಇವರ ಹೆಸರಿನಲ್ಲಿ ನೀಡುವುದು.
- ಒಬ್ಬರು ಮುಖ್ಯ ಅಡಿಗೆಯವರು ಹಾಗೂ ಇಬ್ಬರು ಸಹಾಯಕ ಅಡುಗೆಯವರನ್ನು ಶಾಲೆಯಲ್ಲಿ ಪೂರ್ಣಕಾಲಿಕವಾಗಿರುವಂತೆ ಸೇವೆ ಒದಗಿಸುವಂತಿರಬೇಕು.
- ಸಂಬಂಧಿಸಿದ ಜಿಲ್ಲೆಯವರಿಗೆ ಆದ್ಯತೆಯನ್ನು ನೀಡಲಾಗುವುದು.
- ಆಯ್ಕೆಯಾದ ಸಂಘ/ಏಜೆನ್ಸಿಯೊಂದಿಗೆ ಇಲಾಖೆಯು ಸಂಬಂಧಿಸಿದ ಎಲ್ಲಾ ನಿಯಮಗಳನ್ನು ಅಳವಡಿಸಿ, ಕರಾರು ಪತ್ರವನ್ನು ಮಾಡಿಕೊಳ್ಳಲಾಗುವುದು.
- ಸರಿಯಾಗಿ ಸೇವೆಯನ್ನು ಒದಗಿಸದಿರುವ ಸಂಘ/ಏಜೆನ್ಸಿಯ ಕರಾರನ್ನು ರದ್ದುಗೊಳಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿರುತ್ತದೆ.
- ಸರಿಯಾಗಿ ಸೇವೆಯನ್ನು ಒದಗಿಸದಿರುವ ಹಾಗೂ ಬೇಜವಾಬ್ದಾರಿ ತೋರುವ ಸಂಘ / ಏಜೆನ್ಸಿಯ ಬಿಡ್ ಸೆಕ್ಯೂರಿಟಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ನಿಯಮವನ್ನು ಇಲಾಖೆಯು ಕಾಯ್ದಿರಿಸಿರುತ್ತದೆ.
- ಗುತ್ತಿಗೆಯನ್ನು ಜೂನ್ 2012 ರಿಂದ ಮೇ 2013 ರವರೆಗೆ ಮಾಡಿಕೊಳ್ಳತಕ್ಕದ್ದು.

ಉಪನಿರ್ದೇಶಕರು ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು
ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ

25/5/12

**ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,**
**ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯಂ, ಬೆಂ-2.**

ಸಂಖ್ಯೆ : ಸಿ2/ಸ.ಶಿ.ಅ/ಸನಿವಾಸ ಶಾಲೆ/45/2011-12 ದಿನಾಂಕ : 25/05/2012

## ಪ್ರಕಟಣೆ

**ವಿಷಯ : ವಿಶಿಷ್ಟ ವರ್ಗದ ಮಕ್ಕಳ ವಸತಿ ಶಾಲೆಗೆ ಅರೆಕಾಲಿಕ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದ ನೇಮಕಾತಿ ಕುರಿತು.**

2011-12 ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನದಡಿ ಕೆಲವು ನಿರ್ದಿಷ್ಟ ವರ್ಗಗಳ ಮಕ್ಕಳಿಗೆ ಬೆಂಗಳೂರು ದಕ್ಷಿಣ ತಾಲ್ಲೂಕು, ತಲಘಟ್ಟಪುರದಲ್ಲಿ ವಸತಿ ಶಾಲೆಯನ್ನು ಪ್ರಾರಂಭಿಸಲಾಗಿದೆ. ಸದರಿ ಶಾಲೆಯಲ್ಲಿ 100 ಮಕ್ಕಳು ದಾಖಲಾಗಲು ಅವಕಾಶವಿರುತ್ತದೆ.

2012-13 ನೇ ಸಾಲಿಗೆ ಈ ಶಾಲೆಯ ಮಕ್ಕಳಿಗೆ ಬೋಧಿಸಲು ಅರೆಕಾಲಿಕ ಶಿಕ್ಷಕರು ಮತ್ತು ಸಿಬ್ಬಂದಿಯನ್ನು ಪೂರೈಸಲು ಅರ್ಹ ಸಂಸ್ಥೆಗಳಿಂದ ದರಪಟ್ಟಿ ಕರೆಯಲಾಗಿದೆ. ಆಸಕ್ತರು ಮೊಹರು ಮಾಡಿದ ಲಕೋಟೆಯಲ್ಲಿ ದರಪಟ್ಟಿಯನ್ನು ದಿನಾಂಕ:04-06-2012 ಸಾಯಂಕಾಲ 5.00 ಗಂಟೆಯೊಳಗಾಗಿ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಷರತ್ತುಗಳು ಅನುಬಂಧ-1 ರಲ್ಲಿ ನೀಡಲಾಗಿದೆ.

**ಅನುಬಂಧ-1**

1. ಸಂಬಂಧಿಸಿದ ಸಂಸ್ಥೆಯು ಸರ್ಕಾರದ ನಿಯಮಗಳಡಿಯಲ್ಲಿ ನೋಂದಾಯಿತ ಸಂಸ್ಥೆಯಾಗಿರಬೇಕು.
2. ಸಂಬಂಧಿಸಿದ ಸಂಸ್ಥೆಯು ಸೇವಾ ತೆರಿಗೆ ನೋಂದಣಿ ಹೊಂದಿದ್ದು, ಕಳೆದ ಮೂರು ವರ್ಷಗಳ ಸೇವಾ ತೆರಿಗೆ ಸಲ್ಲಿಸಿರುವ ವಿವರಗಳನ್ನು ಸಲ್ಲಿಸಬೇಕು.
3. ಸಂಬಂಧಿಸಿದ ಸಂಸ್ಥೆಯು ಕಳೆದ ಮೂರು ವರ್ಷಗಳಲ್ಲಿ ಆದಾಯ ತೆರಿಗೆ ಪಾವತಿಸಿರುವ ಕುರಿತು ದಾಖಲೆ ಸಲ್ಲಿಸಬೇಕು.
4. ಕನಿಷ್ಠ 3 ವರ್ಷಗಳ ಸೇವಾ ಅನುಭವ ಇರಬೇಕು.
5. ವರ್ಷದ ಒಟ್ಟು ಗುತ್ತಿಗೆ ಮೊತ್ತ ರೂ.5.58 ಲಕ್ಷಗಳಿಗೆ, ಬಿಡ್ ಸೆಕ್ಯೂರಿಟಿ ಮೊತ್ತ ರೂ.27900/- ಗಳ ಡಿಮ್ಯಾಂಡ್ ಡ್ರಾಫ್ಟ್‌ನ್ನು ಡಿ.ಡಿ.ಪಿ.ಐ. & ಡಿ.ಪಿ.ಓ. ಎಸ್.ಎಸ್.ಎ. ಬೆಂಗಳೂರು ದಕ್ಷಿಣ ಜಿಲ್ಲೆ ಇವರ ಹೆಸರಿನಲ್ಲಿ ನೀಡುವುದು.
6. ಏಜೆನ್ಸಿಯು ಸರ್ಕಾರದ ಇತರ ಇಲಾಖೆಗಳಲ್ಲಿ ಕಪ್ಪುಪಟ್ಟಿಗೆ ಒಳಪಟ್ಟಿರಬಾರದು.
7. ನೇಮಕಗೊಂಡ ನೌಕರರಿಗೆ ಭವಿಷ್ಯನಿಧಿಯ ಸೌಲಭ್ಯ ಒದಗಿಸಬೇಕು. ನೌಕರರ ಭವಿಷ್ಯನಿಧಿಯ ಕುರಿತಾದ ವಿವರಗಳನ್ನು ಜಿಲ್ಲಾ ಕಛೇರಿಗೆ ಎರಡು ತಿಂಗಳಿಗೊಮ್ಮೆ ಸಲ್ಲಿಸುವುದು.
8. ಗೌರವಧನ ಸಂಬಂಧಿಸಿದ ಏಜೆನ್ಸಿಗೆ ಆದಾಯ ತೆರಿಗೆ ಕಟಾಯಿಸಿ ಚೆಕ್ ಮೂಲಕ ನೀಡಲಾಗುವುದು.
9. ಸಂಬಂಧಿಸಿದ ಏಜೆನ್ಸಿಯು ನೌಕರರ ಗೌರವಧನವನ್ನು ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು ಹಾಗೂ ಈ ಕುರಿತ ದಾಖಲೆಯನ್ನು 2 ತಿಂಗಳಿಗೊಮ್ಮೆ ವಸತಿ ಶಾಲೆ ಮುಖ್ಯ ಶಿಕ್ಷಕರು ಬಿ.ಇ.ಓ ಹಾಗೂ ಸ.ಶಿ.ಅ ಜಿಲ್ಲಾ ಕಛೇರಿಗೆ ಒದಗಿಸುವುದು.
10. ಏಜೆನ್ಸಿಯ ಮೂಲಕ ಆಯ್ಕೆ ಮಾಡಿಕೊಳ್ಳಬೇಕಾದ ಸಿಬ್ಬಂದಿಯ ವಿವರ ಹಾಗೂ ಅವರಿಗೆ ನೀಡಬೇಕಾದ ಕನಿಷ್ಠ ನಿವ್ವಳ ಗೌರವಧನದ ಕುರಿತ ವಿವರವನ್ನು ಅನುಬಂಧ-2 ರಲ್ಲಿ ನೀಡಿದೆ.
11. ದರಪಟ್ಟಿಯನ್ನು ಸಲ್ಲಿಸಬೇಕಾದ ಏಜೆನ್ಸಿಯು ಎಲ್ಲಾ ತೆರಿಗೆಗಳು, ಸೇವಾ ತೆರಿಗೆಗಳು ಹಾಗೂ ಪ್ರತಿ ತಿಂಗಳು ನೌಕರರ ನಿವ್ವಳ ಗೌರವಧನವನ್ನು ಒಳಗೊಂಡ ಮೊತ್ತವನ್ನು ದರಪಟ್ಟಿಯಲ್ಲಿ ಸಲ್ಲಿಸಬೇಕು. ದರಪಟ್ಟಿಯ ನಮೂನೆಯನ್ನು ಅನುಬಂಧ-3 ರಲ್ಲಿ ನೀಡಿದೆ.

12. ಉತ್ತಮ ಅರ್ಥಿಕ ಪರಿಸ್ಥಿತಿ ಹೊಂದಿರುವ ಸಂಘಕ್ಕೆ ಆದ್ಯತೆ ನೀಡಲಾಗುವುದು. ಇದಕ್ಕಾಗಿ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಬೇಕು. (ಉಳಿತಾಯ ಮಾಡಲಾದ ಅನುದಾನ ಮತ್ತು ಬ್ಯಾಂಕಿನೊಂದಿಗೆ ಹಣ ವ್ಯವಹಾರ ಹಾಗೂ ನೋಂದಾವಣೆ ಪತ್ರ)
13. ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಹಾಗೂ ಸಂಬಂಧಿಸಿದ ಜಿಲ್ಲೆಯ ಸರ್ಕಾರೇತರ ಸಂಘ ಸಂಸ್ಥೆಗೆ ಆದ್ಯತೆ ನೀಡಲಾಗುವುದು.
14. ಕಾವಲುಗಾರರು, ವಾರ್ಡನ್ ಹಾಗೂ ಸಹಾಯಕಿ ಶಾಲೆಯಲ್ಲಿ ವಾಸ್ತವ್ಯವಿರಬೇಕು.
15. ಬೇಸಿಗೆ ಕಾಲದ ದೀರ್ಘಾವಧಿಯಲ್ಲಿ ವಾರ್ಡನ್, ಸಹಾಯಕಿ ಮತ್ತು ಕಾವಲುಗಾರರು ಶಾಲೆಯಲ್ಲಿ ಹಾಜರಿದ್ದು, ಇತರೆ ಅರೆಕಾಲಿಕ ಸಿಬ್ಬಂದಿಯು ತಾಲ್ಲೂಕಿನ ಸಂಪನ್ಮೂಲ ವ್ಯಕ್ತಿಗಳ ಸಹಕಾರದೊಂದಿಗೆ ಗ್ರಾಮಗಳಿಗೆ ಭೇಟಿ ನೀಡಿ ಅರ್ಹ ಮಕ್ಕಳನ್ನು ಗುರುತಿಸುವ ಕಾರ್ಯ ನಡೆಸಬೇಕು.
16. ಗುತ್ತಿಗೆಯನ್ನು ಜೂನ್-2012 ರಿಂದ ಮೇ-2013 ರವರೆಗೆ ಮಾಡಿಕೊಳ್ಳಲಾಗುವುದು.
17. ಆಯ್ಕೆಯಾದ ಸಂಘ/ಏಜೆನ್ಸಿಯೊಂದಿಗೆ ಇಲಾಖೆಯು ಸಂಬಂಧಿಸಿದ ಎಲ್ಲಾ ನಿಯಮಗಳನ್ನು ಅಳವಡಿಸಿ, ಕರಾರು ಪತ್ರವನ್ನು ಮಾಡಿಕೊಳ್ಳಲಾಗುವುದು.
18. ಸರಿಯಾಗಿ ಸೇವೆಯನ್ನು ಒದಗಿಸದಿರುವ ಸಂಘ/ಏಜೆನ್ಸಿಯ ಕರಾರನ್ನು ರದ್ದುಗೊಳಿಸುವ ಮತ್ತು ದಂಡ ವಿಧಿಸುವ ನಿಯಮವನ್ನು ಇಲಾಖೆಯು ಕಾಯ್ದಿರಿಸಿರುತ್ತದೆ.
19. ಸರಿಯಾಗಿ ಸೇವೆಯನ್ನು ಒದಗಿಸದಿರುವ ಹಾಗೂ ಬೇಜಬಾಬ್ದಾರಿ ತೋರುವ ಸಂಘ/ಏಜೆನ್ಸಿಯ ಬಿಡ್ ಸೆಕ್ಯೂರಿಟಿಯನ್ನು ಮುಟ್ಟುಗೋಲು ಹಾಕಿಕೊಳ್ಳುಲಾಗುವುದು.

## ಅನುಬಂಧ-2

### ಏಜೆನ್ಸಿಯ ಮೂಲಕ ಆಯ್ಕೆ ಮಾಡಿಕೊಳ್ಳಬೇಕಾದ ಸಿಬ್ಬಂಧ್ದಿಯ ವಿವರ ಹಾಗೂ ಅವರಿಗೆ ನೀಡಬೇಕಾದ ಕನಿಷ್ಟ ನಿವ್ವಳ ಗೌರವಧನದ ಕುರಿತ ವಿವರ

| ಕ್ರ.ಸಂ | ಹುದ್ದೆ | ಸಂಖ್ಯೆ | ವಿದ್ಯಾರ್ಹತೆ | ಗೌರವಧನ (ಮಾಹೆಯಾನ) | ಷರಾ |
|---|---|---|---|---|---|
| 1 | ವಾರ್ಡನ್ | 1 ಹುದ್ದೆ | ಬಿ.ಎ.,/ಬಿ.ಎಸ್ಸಿ., ಬಿ.ಎಡ್ | 8000/- | |
| 2 | ಗಣಿತ/ವಿಜ್ಞಾನ ಶಿಕ್ಷಕಿ | 1 ಹುದ್ದೆ | ಬಿ.ಎಸ್ಸಿ., ಬಿ.ಎಡ್.,/ ಪಿ.ಯು.ಸಿ.,(ವಿಜ್ಞಾನ) ಡಿ.ಎಡ್ | 6000/- | |
| 3 | ಹಿಂದಿ ಶಿಕ್ಷಕಿ | 1 ಹುದ್ದೆ | ಬಿ.ಎ. ಬಿ.ಎಡ್ | 5000/- | |
| 4 | ದೈಹಿಕ ಶಿಕ್ಷಕಿ | 1 ಹುದ್ದೆ | ವೃತ್ತಿ ಶಿಕ್ಷಣದಲ್ಲಿ ಡಿಪ್ಲೋಮಾ | 5000/- | |
| 5 | ವೃತ್ತಿ ಶಿಕ್ಷಕಿ/ಕ್ರಾಫ್ಟ್ | 1 ಹುದ್ದೆ | ವೃತ್ತಿ ಶಿಕ್ಷಣದಲ್ಲಿ ಡಿಪ್ಲೋಮೋ | 5000/- | |
| 6 | ಲೆಕ್ಕಿಗರು | 1 ಹುದ್ದೆ | ಬಿ.ಕಾಂ., ಕಂಪ್ಯೂಟರ್ ಕೋರ್ಸ್ | 5000/- | ಇ-ಮೇಲ್ ಜ್ಞಾನ ಹೊಂದಿರಬೇಕು. |
| 7 | ಕಂಪ್ಯೂಟರ್ ಶಿಕ್ಷಕಿ/ ಕಛೇರಿ ಸಹಾಯಕಿ | 1 ಹುದ್ದೆ | ಪದವಿ /ಪಿಯುಸಿ., ಮತ್ತು ಕಂಪ್ಯೂಟರ್ ಡಿಪ್ಲೋಮೋ | 5000/- | ಕಂಪ್ಯೂಟರ್‌ಗಳು ಲಭ್ಯವಿದ್ದಲ್ಲಿ ಮಾತ್ರ ನೇಮಕ ಮಾಡುವುದು |
| 8 | ಸಹಾಯಕಿ | 1 ಹುದ್ದೆ | ಎಸ್.ಎಸ್.ಎಲ್.ಸಿ | 4000/- | |
| 9 | ಕಾವಲುಗಾರ | 1 ಹುದ್ದೆ | 7ನೇ ತರಗತಿ | 3500/- | |
| | | ಒಟ್ಟು | | 46,500/- | |

## ಅನುಬಂಧ-3

## ಏಜೆನ್ಸಿಯು ಸಲ್ಲಿಸಬೇಕಾದ ದರಪಟ್ಟಿಯ ನಮೂನೆ

| ಕ್ರ.ಸಂ | ಹುದ್ದೆ | ಸಂಖ್ಯೆ | ವಿದ್ಯಾರ್ಹತೆ | ನೌಕರರಿಗೆ ನೀಡಬೇಕಾದ ನಿವ್ವಳ ಗೌರವಧನ (ಮಾಹೆಯಾನ) | ಸೇವಾ ತೆರಿಗೆ | ಆದಾಯ ತೆರಿಗೆ (ಟಿ.ಡಿ.ಎಸ್) | ಸೇವಾ ವೆಚ್ಚ | ಸೇವಾ ತೆರಿಗೆ ಆದಾಯ ತೆರಿಗೆ ಸೇವಾ ವೆಚ್ಚ ಹಾಗೂ ನೌಕರರ ಮಾಸಿಕ ನಿವ್ವಳ ಗೌರವಧನ ಒಳಗೊಂಡಂತೆ ಒಟ್ಟು ಮೊತ್ತ |
|---|---|---|---|---|---|---|---|---|
| 1 | ವಾರ್ಡನ್ | 1 ಹುದ್ದೆ | ಬಿ.ಎ/ಬಿಎಸ್ಸಿ, ಬಿ.ಎಡ್ | 8000/- | | | | |
| 2 | ಗಣಿತ/ವಿಜ್ಞಾನ ಶಿಕ್ಷಕರು | 1 ಹುದ್ದೆ | ಬಿ.ಎಸ್ಸಿ. ಬಿ.ಎಡ್/ ಪಿಯುಸಿ(ವಿಜ್ಞಾನ) ಡಿ.ಎಡ್ | 6000/- | | | | |
| 3 | ಹಿಂದಿ ಶಿಕ್ಷಕರು | 1 ಹುದ್ದೆ | ಬಿ.ಎ. ಹಿಂದಿ ಬಿ.ಎಡ್ | 5000/- | | | | |
| 4 | ದೈಹಿಕ ಶಿಕ್ಷಕರು | 1 ಹುದ್ದೆ | ಸಿ.ಪಿ.ಎಡ್ | 5000/- | | | | |
| 5 | ವೃತ್ತಿ / ಕ್ರಾಫ್ಟ್ ಟೀಚರ್ | 1 ಹುದ್ದೆ | ವೃತ್ತಿ ಶಿಕ್ಷಣದಲ್ಲಿ ಡಿಪ್ಲೋಮಾ | 5000/- | | | | |
| 6 | ಲೆಕ್ಕಿಗರು | 1 ಹುದ್ದೆ | ಬಿ.ಕಾಂ., ಕಂಪ್ಯೂಟರ್ ಕೋರ್ಸ್ | 5000/- | | | | |
| 7 | ಕಛೇರಿ ಸಹಾಯಕರು /ಕಂಪ್ಯೂಟರ್ ಶಿಕ್ಷಕರು | 1 ಹುದ್ದೆ | ಪದವಿ/ಪಿಯುಸಿ ಮತ್ತು ಕಂಪ್ಯೂಟರ್ ಡಿಪ್ಲೋಮೋ | 5000/- | | | | |
| 6 | ಸಹಾಯಕರು | 1 ಹುದ್ದೆ | ಎಸ್.ಎಸ್.ಎಲ್.ಸಿ | 4000/- | | | | |
| 7 | ಕಾವಲುಗಾರ | 1 ಹುದ್ದೆ | 7ನೇ ತರಗತಿ | 3500/- | | | | |

ಏಜೆನ್ಸಿಯ ಹೆಸರು ಮತ್ತು ವಿಳಾಸ

ಗಮನಿಸಿ:

1. ಏಜೆನ್ಸಿಯು ಸಲ್ಲಿಸುವ ದರವು ಎಲ್ಲಾ ತೆರಿಗೆಗಳು, ಸೇವಾ ತೆರಿಗೆ ಹಾಗೂ ಇತರೆ ದರಗಳನ್ನು ಒಳಗೊಂಡಿರಬೇಕು.
2. ಏಜೆನ್ಸಿಯು ಸಲ್ಲಿಸಿರುವ ದರದಲ್ಲಿ ವ್ಯತ್ಯಾಸಗಳು ಇದ್ದಲ್ಲಿ, ಅಕ್ಷರಗಳಲ್ಲಿ ನಮೂದಿಸಿದ ದರವನ್ನೇ ಅಂತಿಮವಾಗಿ ಪರಿಗಣಿಸಲಾಗುವುದು.

ಉಪನಿರ್ದೇಶಕರು ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು
ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ

25/1/12